ಮೂಲ ದಾವೆ ನಂ.131/2019
ಡಿ .ಡಬ್ಲ್ಯೂ.1

<u>ದಿನಾಂಕಃ 26.03.2022</u>
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
<u>ಪಾಟೀ ಸವಾಲು ವಾದಿಯರ ಪರವಾಗಿ ಶ್ರೀ. ಬಿ.ಆರ್. ವಕೀಲರಿಂದ ಃ</u>

3. ಸಾಬಣ್ಣ ಎಂದರೆ ನನ್ನ ತಂದೆ ಎಂದರೆ ಸರಿ. ನನ್ನ ಸದರಿ ತಂದೆಗೆ ನನ್ನ ತಾಯಿಯಾದ ಸಾಬವ್ವ ಒಬ್ಬಳೆ ಹೆಂಡತಿಯಾಗಿರುತ್ತಾಳೆ. ಈ ದಾವೆಯಲ್ಲಿ ನಾವು ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ವಾದಿಯರು ನಮಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಿ.ಡಿ.1 ನ್ನು ನಾನು ಆನಲೈನನಲ್ಲಿ ಪಡೆದುಕೊಂಡು ಹಾಜರಪಡಿಸಿರುತ್ತೇನೆ. ಬಸಣ್ಣ ಸೇಡಂ ತಾಲೂಕಿನ ಕುರಕುಂಟಾ ಗ್ರಾಮದಲ್ಲಿ ವಾಸಮಾಡುತ್ತಿದ್ದಾರೆ. ನಾನು ಸದರಿ ಬಸಣ್ಣನವರ ಹತ್ತಿರ ಹೋಗಿ ನಿಮ್ಮ ಆಧಾರ ಕಾರ್ಡ ಕೊಡಿ ಎಂದು ನಾನು ಕೇಳಿರುವುದಿಲ್ಲ. ನಿ.ಡಿ.1, ಒಂದು ಸುಳ್ಳು ದಾಖಲೆ ಎಂದರೆ ಸರಿಯಲ್ಲ. ನಿ.ಡಿ.1 ನ್ನು ನಾನೇ ಸೃಷ್ಟಿಮಾಡಿ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಬಸಣ್ಣನವರಿಗೆ ಬಸವರಾಜ ಎಂದು ಸಹ ಕರೆಯುತ್ತಾರೆ. ಸದರಿ ಬಸಣ್ಣನಿಗೆ ಬಸವರಾಜ ಎಂದು ಸಹ ಕರೆಯುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಯಿಸಿರುತ್ತೇನೆ. ಮೇಲೆ ಹೇಳಿದ ಬಸಣ್ಣನವರ ಅಂದಾಜು ವಯಸ್ಸು 35 ರಿಂದ 40 ವರ್ಷ ಇರಬಹುದು. 2 ನೇ ವಾದಿಯ ವಯಸ್ಸು ಅಂದಾಜು 45 ವರ್ಷ ಇರಬಹುದು. ಮೇಲೆ ಹೇಳಿದ ಬಸಣ್ಣನಿಗೆ ಅಂದಾಜು 35 ರಿಂದ 40 ವರ್ಷ ವಯಸ್ಸು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ವಾದಿಯರು ಕುರಕುಂಟಾ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ. ವಾದಿಯರು ನಮ್ಮೂರಾದ ಹುಲಕಲ್ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ವಾದಿಯ ತವರು ಮನೆ ಹಾಗೂ ಗಂಡನ ಮನೆ ಹುಲಕಲ್ ಗ್ರಾಮದಲ್ಲಿಯೇ ಇವೆ ಎಂದರೆ ಸರಿಯಲ್ಲ. 1 ನೇ ವಾದಿಯ ತವರು ಮನೆ ಹಾಗೂ ಗಂಡನ ಮನೆ ಹುಲಕಲ್ ಗ್ರಾಮದಲ್ಲಿ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಸಣ್ಣನ ಪಡಿತರ ಚೀಟಿಯನ್ನು ನಾನು ಹಾಜರಪಡಿಸಿಲ್ಲ. ಬಸಣ್ಣ ಮತ್ತು ಗಂಗಮ್ಮ ಯಂಕಪ್ಪನ ಮಕ್ಕಳು ಎಂದರೆ ಸರಿ. ಬಸಣ್ಣ ಮತ್ತು

ಗಂಗಮ್ಮ ನಾಗಮ್ಮನ ಮಕ್ಕಳು ಎಂದರೆ ಸಾಕ್ಷಿಯು ಅವರು ಸಿದ್ದಮ್ಮನ ಮಕ್ಕಳು ಎಂದು ನುಡಿಯುತ್ತಾರೆ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಬಸಣ್ಣ ಮತ್ತು ನಾಗಮ್ಮ ಸಿದ್ದಮ್ಮನ ಮಕ್ಕಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. 1 ನೇ ವಾದಿಯು ನನ್ನ ತಂದೆಯ ಮೊದಲನೇ ಹೆಂಡತಿ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ವಂಶಾವಳಿಯನ್ನು ನಾನು ಹಾಜರಪಡಿಸಿಲ್ಲ. ನಮ್ಮ ಗ್ರಾಮಕ್ಕೆ ಗ್ರಾಮಲೆಖಾಧಿಕಾರಿಯವರು ಬಂದು ವಂಶಾವಳಿಯ ಬಗ್ಗೆ ವಿಚಾರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾಡಿಲ್ಲ ಹಾಗೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗ್ರಾಮ ಲೆಖಾಧಿಕಾರಿಯವರು ನಮ್ಮ ಗ್ರಾಮಕ್ಕೆ ಬಂದು ಪಂಚನಾಮೆ ಮಾಡಿ ಅದರಲ್ಲಿ ನನ್ನ ತಂದೆಗೆ ಇಬ್ಬರು ಹೆಂಡತಿಯರು, ನಾವು ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಮಾಡಿದ ಸಂದರ್ಭದಲ್ಲಿ ನಾನು ಹಾಜರಿದ್ದೆನು ಎಂದರೆ ಸರಿಯಲ್ಲ. ನಾನು ಸದರಿ ವಂಶಾವಳಿಯ ಪಂಚನಾಮೆಗೆ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಸರಕಾರಿ ಅಧಿಕಾರಿಗಳಿಗೆ ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ವಂಶಾವಳಿಯನ್ನು ಕೊಟ್ಟರೆ ಎಲ್ಲ ಸತ್ಯ ಹೊರಬರುತ್ತದೆ ಎಂದು ನಾನು ಸದರಿ ವಂಶಾವಳಿಗೆ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

6. ಬಸಣ್ಣನ ಪಡಿತರ ಚೀಟಿಯಲ್ಲಿ ಬಸಣ್ಣ ಮತ್ತು ಗಂಗಮ್ಮನ ತಂದೆ ತಾಯಿ ಯಂಕಪ್ಪ ಮತ್ತು ನಾಗಮ್ಮ ಎಂದು ಬರೆದಿರುವದರಿಂದ ಸದರಿ ಪಡಿತರ ಚೀಟಿಯನ್ನು ನಾನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯ ಪಡಿತರ ಚೀಟಿಯನ್ನು ಹಾಜರಪಡಿಸಿಲ್ಲ. ಬಸವರಾಜ 2 ನೇ ವಾದಿಯ ಸಹೋದರ ಎಂದು ಬರೆದಿರುತ್ತೇನೆ ಎಂದರೆ ಸರಿ. ಮೇಲೆ ಹೇಳಿದ ಗಂಗಮ್ಮನಿಗೆ 35 ಹಾಗೂ ಯಲ್ಲಪ್ಪನಿಗೆ 45 ವರ್ಷ ವಯಸ್ಸಾಗಿರಬಹುದು. ಯಲ್ಲಪ್ಪನ ತಮ್ಮ ಬಸವರಾಜ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಣ್ಣ ಮತ್ತು ಬಸವರಾಜ ಬೇರೆ ಬೇರೆ ವ್ಯಕ್ತಿಗಳು ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ಕೊಡಬಾರದು ಎಂದು ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4 ರಿಂದ 6 ಮತ್ತು 7ನೇ ಪ್ರತಿವಾದಿಯರ ಪರವಾಗಿ ಅವರು ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ-ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.